ಉಳಿದ ದೇಶಗಳಿಗೆ ಹೋಲಿಸಿದರೆ ಮೈಸೂರಿನ ವಾತಾವರಣ ಅತ್ಯಂತ ಸುಂದರ. ನೈಸರ್ಗಿಕ ಸೊಬಗು ಇಲ್ಲಿದೆ. ವಾಸ ಮಾಡಲು ಯೋಗ್ಯ, ಸುರಕ್ಷಿತವೂ ಆದ ವಾತಾವರಣವನ್ನು ಮೈದುಂಬಿಕೊಂಡಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದು ಅಷ್ಟೊಂದು ಸುಲಭವಲ್ಲ. ಅದರಲ್ಲೂ ಪ್ರವಾಸಿ ತಾಣಗಳಲ್ಲಿ ಅದು ಮತ್ತಷ್ಟು ಸವಾಲಿನ ವಿಷಯ.



ಪ್ರದೇಶಗಳತ್ತ ಸೆಳೆಯುವ ಕೆಲಸ ನಡೆದಿಲ್ಲ.

## ಅರಮನೆಯ ಸೌಂದರ್ಯ

ಆಗ್ರಾದ ತಾಜಮಹಲ್ ರೀತಿಯೇ ತನ್ನ ಸ್ನಿಗ್ಧ ಸೌಂದರ್ಯದ ಮೂಲಕ ವಿಶ್ವದ ಅಸಂಖ್ಯಾತ ಪ್ರವಾಸಿಗರನ್ನು ಸೆಳೆಯುತ್ತಿರುವ ಮೈಸೂರಿನ ಅಂಬಾವಿಲಾಸ ಅರಮನೆ ಸೃಷ್ಟಿಸಿರುವ ಕ್ರೇಜ್ ಅಪಾರ. ಈಗಿನ ಅರಮನೆ ನಿರ್ಮಾಣವಾಗಿ ನೂರಾರು ವರ್ಷ ಕಳೆದಿದ್ದರೂ ಅದೇ ಬೆರಗು, ಅದೇ ವಿಸ್ಮಯ. ಈ ಪಾರಂಪರಿಕ ಬೆಡಗಿಗೆ ಮನಸೋಲದವರಾರು? ಅಂಥ ಅರಮನೆ ವೀಕ್ಷಣೆಗೆ ಬರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಕಳೆದ 10 ವರ್ಷಗಳಲ್ಲಿ ಭೇಟಿ ನೀಡಿದ ವಿದೇಶಿ ಪ್ರವಾಸಿಗರನ್ನೇ ಪರಿಗಣಿಸಿದರೆ ಆ ಸಂಖ್ಯೆ ಅರ್ಧದಷ್ಟು ಕುಸಿದಿದೆ. ಅರಮನೆ ಬದಲಾಗಿಲ್ಲ; ಆದರೆ, ಅದನ್ನು ಬೇರೆ ರೀತಿಯಲ್ಲಿ ಷೋಕೇಸ್ ಮಾಡುವಲ್ಲಿ ಅಧಿಕಾರ ವರ್ಗ ಎಡವುತ್ತಿದೆ.

## ಟಾಂಗಾ ಗಾಡಿ ಕೇಳುವವರೇ ಇಲ್ಲ...

ಸಾಂಸ್ಕೃತಿಕ ನಗರಿಗೆ ಕಿರೀಟದಂತಿರುವ ಟಾಂಗಾಗಳು ಗುಜರಿ ಸೇರುತ್ತಿವೆ. ಇನ್ನು ಕೆಲವು ಉತ್ಸವ ಮೂರ್ತಿಗಳಂತಾಗಿವೆ. ಆಟೊಗಳು, ಟ್ಯಾಕ್ಸಿಗಳು, ಐದು ನಿಮಿಷಕ್ಕೊಂದು ಸಿಟಿ ಬಸ್, ಹೊಸದಾಗಿ ಬಂದಿರುವ ಓಲೊ ಆಟೊ, ರ್‍ಯಾಪಿಡೊ ಬೈಕುಗಳ ಅಬ್ಬರದಲ್ಲಿ ಟಾಂಗಾವಾಲಗಳಿಗೆ ಕೆಲಸವೇ ಇಲ್ಲದಾಗಿದೆ. ದಶಕಗಳಿಂದ ಇದೇ ಕೆಲಸ ಮಾಡಿಕೊಂಡು ಬಂದಿರುವ ಟಾಂಗಾವಾಲಗಳ ಬದುಕು ಬೀದಿಗೆ ಬಿದ್ದಿದೆ. ಕೊರೊನಾ ಮಹಾಮಾರಿ ಮತ್ತಷ್ಟು ಹೊಡೆತ ನೀಡಿತು. ಈಗಲೂ ಒಂದಿಷ್ಟು ಟಾಂಗಾಗಳು ಅರಮನೆ, ಮೃಗಾಲಯದ ಮುಂದೆ ನಿಂತಿರುತ್ತವೆ. ಪ್ರವಾಸಿಗರು ತಮ್ಮ ಮಕ್ಕಳ ಖುಷಿಗಷ್ಟೇ ಒಂದಿಷ್ಟು ಹೊತ್ತು ಟಾಂಗಾ ಬಳಸುತ್ತಿದ್ದಾರೆ. 300ಕ್ಕೂ ಹೆಚ್ಚು ಇದ್ದ ಟಾಂಗಾ ಗಾಡಿಗಳು ಈಗ 30ಕ್ಕೆ ಕುಸಿದಿವೆ.

## ಮರೆಯಾಗುತ್ತಿರುವ ಗರಡಿ ಮನೆ

ಮೈಸೂರು ಕುಸ್ತಿಗೂ ಪ್ರಸಿದ್ಧಿ. ಅದರಲ್ಲೂ ದಸರೆಯಲ್ಲಿ ವಿಶೇಷ ಆಕರ್ಷಣೆ. ಆದರೆ, ಈಗ ಮೈಸೂರಲ್ಲಿ ಗರಡಿ ಮನೆಗಳೇ ಮರೆಯಾಗುತ್ತಿವೆ. ಜನರಲ್ಲೂ ಆಸಕ್ತಿ ಕಾಣಿಸುತ್ತಿಲ್ಲ. ವಾರಕ್ಕೊಮ್ಮೆ ಕುಸ್ತಿ ಸ್ಪರ್ಧೆ ಆಯೋಜಿಸಲಾಗುತಿತ್ತು. ಈಗ ತಿಂಗಳಾದರೂ ನಡೆಯುವುದಿಲ್ಲ. ಆ ಸೊಬಗು, ವೈಭವ ಮರೆಯಾಗುತ್ತಿದೆ.

## ನಡುಗಿದ ಸಾಂಸ್ಕೃತಿಕ ನಗರಿ!

ಈಚೆಗಿನ ನಡೆದ ದರೋಡೆ ಹಾಗೂ ಅತ್ಯಾಚಾರ ಪ್ರಕರಣಗಳು ಮೈಸೂರು ನಗರಿ ನಡುಗಿಸಿದ್ದು ಮಾತ್ರವಲ್ಲ; ದೇಶದ ಗಮನವನ್ನು ಇತ್ತ ಸೆಳೆದವು.

ನಿಜ, ಇಂಥ ಅಹಿತಕರ ಘಟನೆಗಳು ಎಲ್ಲಾ ಕಡೆ ವರದಿಯಾಗುತ್ತಿವೆ. ಆದರೆ, ಮೈಸೂರಿನಲ್ಲಿ ಎಂದಾಗ ಎಲ್ಲರ ಕಿವಿ ಅಲರ್ಟ್ ಆಗುತ್ತದೆ. ‘ಅಯ್ಯೊ ಸಾಂಸ್ಕೃತಿಕ ನಗರಿಯಲ್ಲಿ ಈ ರೀತಿ ಆಯಿತಾ?’, ‘ನಿವೃತ್ತರ ಸ್ವರ್ಗದಲ್ಲಿ ಇಂಥ ಘಟನೆಯೇ?’, ಮೈಸೂರಿನಲ್ಲಿ ನಡೆಯಿತಾ ಎಂಬ ಪ್ರಶ್ನೆಗಳು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸಂಜೆ ಸುತ್ತಾಡಲು ಹೋಗಿದ್ದ ಜೋಡಿ ಮೇಲೆ ಹಲ್ಲೆ ನಡೆಸಲಾಯಿತು. ಯುವತಿ ಮೇಲೆ ಅತ್ಯಾಚಾರ ಎಸಗಲಾಯಿತು. ನಗರದ ಹೃದಯ ಭಾಗದ ಆಭರಣ ಮಳಿಗೆಯೊಂದಕ್ಕೆ ನುಗ್ಗಿ ದರೋಡೆ ನಡೆಸಲಾಯಿತು. ಎದುರಾದ ದಾರಿಹೋಕನ ಮೇಲೆ ದರೋಡೆಕೋರರು ಗುಂಡು ಹಾರಿಸಿ